Ref.No. 37-2019

WW-1,

ದಿನಾಂಕಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದ

ಕೆಲಸಗಾರರ ಕೆಲಸವನ್ನು ಖಾಯಂಗೊಳಿಸುವುದು ಆಡಳಿತ ವರ್ಗ ದವರ ವಿವೇಚನೆಗೆ ಬಿಟ್ಟಿರುತ್ತದೆ ಎಂದರೆ ಸಂಪೂರ್ಣವಾಗಿಯಲ್ಲ ಎಂದು ನುಡಿಯುತ್ತಾರೆ . ಯಾವುದೇ ಕೆಲಸಗಾರರಿಗೆ ಖಾಯಂಗೊಳಿಸುವುದು ಆತನ ಹಕ್ಕಾಗಿರುವುದಿಲ್ಲ ಎಂದರೆ ಸರಿಯಲ್ಲ . ಅಹರ್ತೆ ಇದ್ದಲ್ಲಿ ಹಕ್ಕಾಗಿ ಪರಿವರ್ತನೆಗೊಳ್ಳುತ್ತದೆ ಎಂದು ನುಡಿಯುತ್ತಾರೆ . ಅರ್ಹತೆಯನ್ನು ಆಡಳಿತ ವರ್ಗದವರು ತೀರ್ಮಾನಿಸುತ್ತಾರೆ ಎಂದರೆ ಸರಿ . ಕೆಲಸಗಾರರು ನಿಯೋಜಿಸಿದ ಕೆಲಸದಲ್ಲಿ ಸರಿಯಾಗಿ ಕೆಲಸ ಮಾಡುತ್ತಾರೆ ಎಂದರೆ ಅದು ಅರ್ಹತೆಯಾಗಿರುತ್ತದೆ. ಬಿ ವಿ ಯೋಗೇಶ್ ನ್ನು ಹೊರತು ಪಡಿಸಿ ಉಳಿದ 14 ಜನರ ಪರವಾಗಿ ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ . ಮಹೇಶ್ ಆರ್ ಎಂಬುವವರು ಕೂಡ ತಮ್ಮನ್ನು ಖಾಯಂಗೊಳಿಸುವಂತೆ ಈ ನ್ಯಾಯಾಧೀಕರಣದ ಮುಂದೆ ಕೇಳುತ್ತಿದ್ದಾರೆ ಎಂದರೆ ಸರಿ . ಸದರಿಯವರ ವಿದ್ಯಾಹರ್ತೆಯನ್ನು ನಾನು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದ. ಸದರಿಯವರ work experience ನ ಬಗ್ಗೆ ನನಗೆ ಜ್ಞಾನ ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಅವರು ಆಪರೇಟರ್ ಆಗಿ ಕೆಲಸ ಮಾಡುತ್ತಾರೆ ಇದನ್ನು ಹೊರತುಪಡಿಸಿ ನನಗೆ ಬೇರೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ . 2 ನೇ ಪಾರ್ಟಿ ಸಂಸ್ಥೆ ಯಲ್ಲಿ recruitment policy, promotion policy and other ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ . ಒಬ್ಬ ಕೆಲಸಗಾರನನ್ನು ಮೊದಲು ಅಪ್ರೆಂಟಿಸ್ ಆಗಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ . ನಂತರ ಟ್ರೈನಿ ಯಾಗಿ ನಿಗದಿತ ಅವಧಿಗೆ ತೆಗೆದುಕೊಳ್ಳುತ್ತಾರೆ ಎಂದರೆ ಸರಿ . ಟ್ರೈನಿಂಗ್ ನಲ್ಲಿ ತರಬೇತುದಾರರ performance ನ್ನು ನೋಡಿ ಆಡಳಿತ ವರ್ಗ ದವರು ಅವರನ್ನು ಮುಂದೆ ಯಾವ level ಗೆ ತೆಗೆದುಕೊಳ್ಳಬೇಕು ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು ಉತ್ತಮವಾಗಿದ್ದರೆ ತೆಗೆದುಕೊಳ್ಳುತ್ತಾರೆ ಇಲ್ಲದಿದ್ದರೆ ಬಿಡುಗಡೆ ಗೊಳಿಸುತ್ತಾರೆ ಎಂದು ನುಡಿಯುತ್ತಾರೆ . ತರಬೇತುದಾರರ performance ಉತ್ತಮವಾಗಿದ್ದಲ್ಲಿ ಅವರನ್ನು fixed term employment ಮೇಲೆ ತೆಗೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ . ತರಬೇತಿದಾರರಿಗೆ ಸ್ಟೇ ಫಡ್ ನೀಡಲಾಗುತ್ತದೆ ಎಂದರೆ ಸರಿಯಲ್ಲ. 2 ನೇ ಪಾರ್ಟಿಯವರು ತರಬೇತಿದಾರರಿಗೆ ಸ್ಟೇ ಫಡ್ ನೀಡುತ್ತಾರೆ ಎಂದರೆ ಸರಿಯಲ್ಲ . ಮಹೇಶ್ ಆರ್ ರವರುನ್ನು 2014 ರಲ್ಲಿ ಆಡಳಿತ ವರ್ಗ 2 ವರ್ಷದ ಅವಧಿಗೆ technical trainee ಆಗಿ ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ಅವರಿಗೆ ಮೊದಲ ವರ್ಷ 5,000/- ಮತ್ತು 6,000/- ಸ್ಟೆ ಫಡ್ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿದಾರರಿಗೆ ಮಹೇಶ್ ಆರ್ ರವರ ಟ್ರೈನಿ ಎಂಗೇಜ್ ಮೆಂಟ್ ಲೆಟರ್ ತೋರಿಸಿದಾಗ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ .

ಆಡಳಿತ ವರ್ಗ ದವರು ಮತ್ತು  ತರಬೇತಿದಾರರ ನಡುವಿನ ಆಂತರಿಕ ಪತ್ರ ವ್ಯವಹಾರಗಳ ಬಗ್ಗೆ ನನಗೆ ಅರಿವು ಇರುವುದಿಲ್ಲ. 1 ನೇ ಪಾರ್ಟಿ ಸದಸ್ಯರು ನನಗೆ ನೀಡಿದ ಮಾಹಿತಿ ಹೊರತುಪಡಿಸಿ ಬೇರೆ ಯಾವುದೇ ಮಾಹಿತಿ ನನಗೆ ಗೊತ್ತಿಲ್ಲ. ಈ ನ್ಯಾಯಾಧೀಕರಣ ದ ಮುಂದೆ ಇರುವ 14 ಜನರು ಈಗಲೂ ಕೂಡ ನಮ್ಮ ಸದಸ್ಯರಾಗಿರುತ್ತಾರೆ ಎಂದರೆ ಸರಿ . ಸದರಿ 14 ಜನರು ಯಾವಾಗ ಅಪ್ರೆಂಟಸ್ ಆಗಿ ಕೆಲಸಕ್ಕೆ ಸೇರಿಕೊಂಡರು ಹಾಗೂ ಮುಂದಕ್ಕೆ ಯಾವ ಯಾವ ಯವಾಗ ಹೋಗಿರುತ್ತಾರೆ ಎಂಬ ಮಾಹಿತಿ ದಾಖಲೆಗಳನ್ನು ನೋಡಿ ಹೇಳಬಹುದು. ಟ್ರೈನಿಸ್ ಗಳನ್ನು fixed contract ಗೆ ತೆಗೆದುಕೊಂಡು ನಂತರ confirm ಮಾಡಲಾಗುತ್ತದೆ ಎಂದರೆ ಇರಬಹುದು. confirmation trainee ಗಳ performance ಮೇಲೆ ಆಧಾರಿತವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಸ್ವಲ್ಪಮಟ್ಟಿಗೆ ಮಾತ್ರ ಆಧಾರಿತವಾಗಿರುತ್ತದೆ ಎಂದು ನುಡಿಯುತ್ತಾರೆ . ಆಡಳಿತ ವರ್ಗದವರು ಟ್ರೈನಿಗಳನ್ನು poor performer, average performer, best performer ಗಳೆಂದು ತೀರ್ಮಾನ ಮಾಡುತ್ತಾರೆ ಎಂದರೆ ಸರಿ . ಆದುದರಿಂದ ಆಡಳಿತ ವರ್ಗದವರು ಟ್ರೈನಿಗಳನ್ನು ಖಾಯಂಗೊಳಿಸಲು ಅಥವಾ ಅವರ ಟ್ರೈನಿಂಗ್ ಅವಧಿಯನ್ನು ಮುಂದುವರೆಸಬೇಕು ಅಥವಾ ಅವರನ್ನು ಕೆಲಸದಿಂದ ತೆಗೆದು ಹಾಕಬೇಕು ಎಂದು ತೀರ್ಮಾನಿಸಲು ತಕ್ಕ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸಾಪೇಕ್ಷವಾಗಿ ( ರಿಲೇಟಿವ್ ) ಸರಿ . ನಾನು ಯೂನಿಯನ್ ನ ಹೊರಗಿನ ಆಪೀಸ್ ಬೇರೆರ್ ಆಗಿದ್ದರಿಂದ ನನಗೆ 2 ನೇ ಪಾರ್ಟಿ ಸಂಸ್ಥೆ ಯ ಆಂತರಿಕ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು  ಕಾರ್ಮಿಕ ರು ನೀಡಿದ ಮಾಹಿತಿ ಮತ್ತು ದಾಖಲಾತಿಗಳ ಆಧಾರದ ಮೇಲೆ ಮಾತ್ರ ಸಾಕ್ಷ್ಯ ನುಡಿಯುತ್ತಿದ್ದೇನೆ. ಆಡಳಿತ ವರ್ಗ ಮತ್ತು ಕಾರ್ಮಿಕರ ಸಂಬಂಧ ದಾಖಲೆಗಳಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ ಎಂದರೆ ಇರಬಹುದು. ಆಡಳಿತ ವರ್ಗ ಮತ್ತು ಕಾರ್ಮಿಕರ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ . ಆಡಳಿತ ವರ್ಗದವರು ಟೌನ್ ಹಾಲ್ ಮೀಟಿಂಗ್ಸ್  ಗಳನ್ನು ಮೂರು ತಿಂಗಳಿಗೊಮ್ಮೆ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಮೀಟಿಂಗ್ಸ್   ಗಳಲ್ಲಿ Board of Directors, HR, Head of Production ರವರು ಕೆಲಸಗಾರರೊಂದಿಗೆ ಮಾತನಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈ ಪ್ರಕರಣದ 14 ಜನ ಕೆಲಸಗಾರರಿಗೆ ಆಡಳಿತ ವರ್ಗ ದವರ ನಡುವೆ ಆದಂತಹ ಲಿಖಿತ ಸಂವಾದ ಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ .

ಸಾಕ್ಷಿದಾರರಿಗೆ ಒಂದು ಫೋಟೋ ವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಕಾಣಿಸುತ್ತಿರುವುದು ಮಹೇಶ್ ಆರ್ ಎಂದು ನುಡಿಯುತ್ತಾರೆ . ಸದರಿ ಫೋಟೋವನ್ನು ನಿ ಎಂ-5 ಎಂದು ಗುರುತಿಸಲಾಯಿತು. ನಿ ಎಂ-5 ಕ್ಕೆ ಸಂಬಂಧಿಸಿದಂತೆ ಆಡಳಿತ ವರ್ಗದವರು ಮಹೇಶ್ ಆರ್ ರವರಿಗೆ 01.12.2023 ರಲ್ಲಿ ಚಾರ್ಜ್ ಶೀಟ್ ಕಮ್ ಷೋ ಕಾಸ್ ನೋಟೀಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಮಹೇಶ್ ಆರ್ ರವರ ಸಹಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ.  ಮಹೇಶ್ ಆರ್ ರವರಿಗೆ 2023-24 ನೇ ಸಾಲಿನಲ್ಲಿ ಎಷ್ಟು ಸ್ಟೇ ಪಡ್ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ .

ನನಗೆ ಕನಿಷ್ಟ ವೇತನ ಕಾಯಿದೆ ಹಾಗೂ ಅದರಲ್ಲಿ ಮೂಲ ವೇತನ ಮತ್ತು ವಿಡಿಎ ಕಾಂಪೊನೆಂಟ್ಸ್ ಗಳ ಬಗ್ಗೆ ಗೊತ್ತಿರುತ್ತದೆ. ಸದರಿ ಕಾನೂನಿನಲ್ಲಿ ಕನಿಷ್ಟ ವೇತನದ 75% ನ್ನು ಸ್ಟೇ ಪಡ್ ಆಗಿ ನೀಡಬೇಕು ಎಂದರೆ 2 ವರ್ಷದ ಟ್ರೈನಿಂಗ್ ಅವಧಿಗೆ ಮಾತ್ರ ಎಂದು ನುಡಿಯುತ್ತಾರೆ . ಟ್ರೈನಿಂಗ್ ಅವಧಿಯನ್ನು ತೀರ್ಮಾನಿಸುವುದು ಆಡಳಿತ ವರ್ಗದ ವಿವೇಚನಗೆ ಒಳಪಟ್ಟಿರುತ್ತದೆ ಎಂದರೆ ಸರಿಯಲ್ಲ . ಕನಿಷ್ಟ ವೇತನ ಕಾಯಿದೆ ಯಲ್ಲಿ unskilled, semi skilled, skilled and highly skilled ಎಂಬ ವಿಭಾಗಗಳಿರುತ್ತವೆ ಎಂದರೆ ಸರಿ . ಟ್ರೈನಿಗಳು ಸದರಿ ನಾಲ್ಕೂ ವಿಭಾಗಗಳಿಗೂ ಸೇರುವುದಿಲ್ಲ ಎಂದರೆ ಕೆಲಸಗಾರರ ಸ್ವರೂಪದ ಮೇಲೆ ನಿಂತಿರುತ್ತದೆ ಎಂದು ನುಡಿಯುತ್ತಾರೆ .

ಈ ಪ್ರಕರಣದಲ್ಲಿ ಮೊದಲು 246 ಕೆಲಸಗಾರರಿದ್ದು ನಂತರ 97 ಜನ confirmation ನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಸದರಿ 246 ಕೆಲಸಗಾರರಲ್ಲಿ 4 ಜನರ ಹೆಸರು repetition ಆಗಿತ್ತು ಎಂದರೆ ಸರಿ . ಸದರಿ 246 ಕೆಲಸಗಾರರಲ್ಲಿ 49 ಕೆಲಸಗಾರರ ಹೆಸರು 2 ನೇ ಪಾರ್ಟಿ ಸಂಸ್ಥೆ ಯ ರೋಲ್ ನಲ್ಲಿ ಇರಲಿಲ್ಲ ಎಂದರೆ ಅರ್ಜಿ ಸಲ್ಲಿಸುವ ಕಾಲದಲ್ಲಿ ಇತ್ತು ನಂತರ ಇರಲಿಲ್ಲ ಎಂದು ನುಡಿಯುತ್ತಾರೆ . ಸದರಿ ಕೆಲಸಗಾರರು ನನ್ನ ಅವಧಿಯ ಹಿಂದೆ ಇದದ್ದುರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಸದರಿ 246 ಕೆಲಸಗಾರರಲ್ಲಿ 5 ಜನರ ಹೆಸರು mismatch ಆಗಿರುವುದನ್ನು ಆಡಳಿತ ವರ್ಗ ದವರು ತೋರಿಸಿದ ನಂತರ ಅವರನ್ನು ಕೈ ಬಿಡಲಾಗಿರುತ್ತದೆ ಎಂದರೆ ಸರಿ . ಸದರಿ 246 ಕೆಲಸಗಾರರಲ್ಲಿ 66 ಜನರನ್ನು ಆಡಳಿತ ವರ್ಗದವರು ದುರ್ನಡತೆ ಕಾರಣಕ್ಕಾಗಿ ಕೆಲಸದಿಂದ ವಜಾ ಮಾಡಿರುತ್ತಾರೆ ಎಂದರೆ ಸರಿ . ಸದರಿ 246 ಕೆಲಸಗಾರರಲ್ಲಿ 24 ಕೆಲಸಗಾರರು confirmation ಅನ್ನು ಒಪ್ಪಿಕೊಳ್ಳಲಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಉಳಿದಂತಹ 14 ಜನ ಕೆಲಸಗಾರರನ್ನು ಆಡಳಿತ ವರ್ಗದವರು ಕರೆಸಿ confirmation ತೆಗೆದುಕೊಳ್ಳುವಂತೆ ಹೇಳಿದರೂ ನಿರಾಕರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಕೆಲಸಗಾರರರು ಸ್ಪಷ್ಟನೆಯನ್ನು ಕೇಳಿರುತ್ತಾರೆ ಆಡಳಿತ ವರ್ಗದವರು ಇನ್ನೂ ಕುಡ ಉತ್ತರಿಸಿರುವುದಿಲ್ಲ ಎಂದು ನುಡಿಯುತ್ತಾರೆ . 246 ಕೆಲಸಗಾರರಲ್ಲಿ ಸದರಿ 14 ಜನರನ್ನು ಹೊರತುಪಡಿಸಿ ಉಳಿದ ಕೆಲಸಗಾರರು ಯೂನಿಯನ್ ಸದಸ್ಯರಾಗಿರುವುದಿಲ್ಲ ಎಂದರೆ ಸರಿಯಲ್ಲ . ಸುಮಾರು 60–70 ಜನ ಕೆಲಸಗಾರರು ಸದಸ್ಯರಾಗಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ 14 ಜನರು ನಮ್ಮ ಸಲಹೆಯಂತೆ confirmation ಲೆಟರ್ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ 14 ಜನರು confirmation ಲೆಟರ್ ಪಡೆದುಕೊಂಡಲ್ಲ ಯೂನಿಯನ್ ಇಂದ ಹೊರಗೆ ಹೋಗುತ್ತಾರೆ ಎಂದು ತಿಳಿದು ಅವರಿಗೆ confirmation ಲೆಟರ್ ಪಡೆದುಕೊಳ್ಳದಂತೆ ಸಲಹೆ ನೀಡಿರುತ್ತೇವೆ ಎಂದರೆ ಸರಿಯಲ್ಲ .

ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.